# ಕರ್ನಾಟಕ ಸರ್ಕಾರ

## ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ,ಮಲ್ಲೇಶ್ವರಂ,ಬೆಂಗಳೂರು-12

ಸಂಖ್ಯೆ:ಪ.ಪೂ.ಶಿ.ಇ/ಶೈ.ಶಾ.04/ಹೆ.ಮ.ಶು.ವಿ/SCP/2013-14 ದಿನಾಂಕ30 -09-2013

### ಜ್ಞಾಪನ

ವಿಷಯ: 2012-13ನೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕಗಳನ್ನು ವಿದ್ಯಾವಿಕಾಸ ಯೋಜನೆಯ ಲೆಕ್ಕಶೀರ್ಷಿಕೆ "2202-02-107-3-02-422" ಎಸ್‌ಸಿಪಿ ಯೋಜನೆಯಡಿಯಲ್ಲಿ ಎರಡನೇ ಕಂತಾಗಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಮರುಪಾವತಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಇಡಿ 66 ಯೋಯೋಕ 2013 ದಿನಾಂಕ 12-08-2013.
2. ಸರ್ಕಾರಕ ಆದೇಶ ಸಂಖ್ಯೆ ಇಡಿ 16 ಟಿಪಿಯು 2010 ದಿನಾಂಕ 21-05-2010.

*****

ಉಲ್ಲೇಖ(1)ರ ಸರ್ಕಾರದ ಆದೇಶದ ಅನುಬಂಧ-2ರ ಕ್ರಮ ಸಂಖ್ಯೆ 2ರಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಸರ್ಕಾರೇತರ ಮರು ಪಾವತಿಗಾಗಿ ಲೆಕ್ಕ ಶೀರ್ಷಿಕೆ "2202-02-107-3-02-422" ಎಸ್‌ಸಿಪಿ ಯೋಜನೆಯಡಿಯಲ್ಲಿ ಒಟ್ಟು 150ಲಕ್ಷರೂ.ಗಳ ಅನುದಾನದಲ್ಲಿ ಎರಡನೇ ಕಂತಾಗಿ ರೂ 75ಲಕ್ಷಗಳನ್ನು ಅನುದಾನ ಬಿಡುಗಡೆ ಮಾಡಿಲಾಗಿದೆ. 2012-13ನೇ ಸಾಲಿನ ಸರ್ಕಾರೇತರ ಶುಲ್ಕಗಳನ್ನು ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅನುದಾನ ಲಭ್ಯತೆ ಇಲ್ಲದ ಕಾರಣ ಅನುದಾನವನ್ನು ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ. ಉಲ್ಲೇಖ(1)ರ ಸರ್ಕಾರದ ಆದೇಶದ 2012-13ನೇ ಸಾಲಿನಲ್ಲಿ ಮುಂದುವರೆಸಲಾಗಿದ್ದ ಹಾಗೂ 2012-13ನೇ ಸಾಲಿನಲ್ಲಿ ಹೊಸದಾಗಿ ಮಂಜೂರು ಮಾಡಲಾದ ಕಾರ್ಯಕ್ರಮಗಳನ್ನು ಮಾತ್ರ ಈ ಅದೇಶದಂತೆ 2013-14ನೇ ಸಾಲಿಗೆ ಮುಂದುವರೆಸಿ ಅನುಷ್ಠಾನಗೊಳಿಸುವುದು ಅದರಂತೆ ಸದರಿ ಅನುದಾನವನ್ನು ಬಿಡುಗಡೆ ಮಾಡಲು2012-13ನೇ ಸಾಲಿನಲ್ಲಿ ರಾಜ್ಯದ ಪ್ರತಿ ಜಿಲ್ಲೆಯ ಉಪನಿರ್ದೇಶಕರು ತಮ್ಮ ವ್ಯಾಪ್ತಿಗೆ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿನಿಯರ ಪೂರ್ಣ ಅಂಕಿಅಂಶಗಳ ಮಾಹಿತಿಗಳನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಗಣಕಶಾಖೆಯಿಂದ ಪಡೆಯಲಾಯಿತು. ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿರುವ ಸರ್ಕಾರೇತರ ಶುಲ್ಕಗಳು ಈ ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ |
|---|---|---|---|
| 1 | ಕ್ರೀಡಾ ಶುಲ್ಕ | 70-00 | 70-00 |
| 2 | ವಾಚನಾಲಯ ಶುಲ್ಕ | 100-00 | 100-00 |
| 3 | ಶಿಕ್ಷಕರ ಕಲ್ಯಾಣ ನಿಧಿ | 21-00 | 21-00 |
| 4 | ವಿದ್ಯಾರ್ಥಿ ಕಲ್ಯಾಣ ನಿಧಿ | 21-00 | 21-00 |
| 5 | ಪರೀಕ್ಷಾ ಶುಲ್ಕ (ಕಾಲೇಜಿನ) | 140-00 | 140-00 |
| 6 | ವಿಶೇಷ ಕ್ರೀಡಾ ಶುಲ್ಕ | 28-00 | 28-00 |
| | | 380-00 | 380-00 |

ವಿವರಿಸಿರುವ ಈ ಶುಲ್ಕಗಳಂತೆ ಪ್ರತಿ ವಿದ್ಯಾರ್ಥಿನಿಗೆ ರೂ380/-ರಂತೆ ಎಸ್‌ಸಿಪಿ ಯೋಜನೆಯಡಿಯಲ್ಲಿ ಶುಲ್ಕ ಮರುಪಾವತಿಗಾಗಿ ಅನುದಾನವನ್ನು ಸರ್ಕಾರದ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರುಗಳಿಗೆ ಬಿಡುಗಡೆ ಮಾಡಬೇಕಾಗಿದೆ.

ಉಲ್ಲೇಖ-01ರಲ್ಲಿ ಸರ್ಕಾರವು ಪ್ರಸಕ್ತ ಶೈಕ್ಷಣಿಕ ಸಾಲಿಗೆ ಒಟ್ಟು ರೂ 150.00 ಲಕ್ಷಗಳನ್ನು ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರ ಸರ್ಕಾರೇತರ ಶುಲ್ಕ ಮರುಪಾವತಿಗಾಗಿ-ವಿದ್ಯಾವಿಕಸ ಲೆಕ್ಕಶೀರ್ಷಿಕೆ "2202-02-107-3-02-422" ಎಸ್‌ಸಿಪಿ ಯೋಜನೆಯಡಿಯಲ್ಲಿ ಪ್ರಥಮ ಮತ್ತು ದ್ವಿತೀಯ ಕಂತಾಗಿ ರೂ 75ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ.

ಈ ಕಂತಿನ ಅನುದಾನವನ್ನು ಸೆಪ್ಟೆಂಬರ್ ತಿಂಗಳೊಳಗೆ ಖರ್ಚು ಮಾಡಬೇಕೆಂದು ತಿಳಿಸಿರುತ್ತಾರೆ. ಒಂದು ವೇಳೆ ಸೆಪ್ಟೆಂಬರ್ ತಿಂಗಳಿನೊಳಗೆ ಪ್ರಥಮ ಮತ್ತು ದ್ವಿತೀಯ ಕಂತಿನ ಅನುದಾನವನ್ನು ಬಳಸಿಕೊಳ್ಳದಿದ್ದರೆ ಮುಂದಿನ ಕಂತಿನ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ 2012-13 ನೇ ವರ್ಷದಲ್ಲಿ ಅಭ್ಯಾಸಮಾಡಿದ 19636 ವಿದ್ಯಾರ್ಥಿನಿಯರಿಗೆ ರೂ 73,57,940/-ಗಳನ್ನು ಶುಲ್ಕ ಮರುಪಾವತಿಗಾಗಿ ದ್ವಿತೀಯ ಕಂತಿನಲ್ಲಿ ಪ್ರತಿ ವಿದ್ಯಾರ್ಥಿನಿಗೆ ರೂ 380 ರಂತೆ ಅಯಾಯ ಜಿಲ್ಲೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಅನುದಾನವನ್ನು ಬಿಡುಗಡೆ ಮಾಡಿದೆ. ಉಪನಿರ್ದೇಶಕರುಗಳಿಗೆ ಬಿಡುಗಡೆ ಮಾಡಲಾದ ಮೊತ್ತವನ್ನು, ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧ-01 ರಲ್ಲಿ ತೋರಿಸಲಾಗಿದೆ. ಉಪನಿರ್ದೇಶಕರುಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಳೆದ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ಅಭ್ಯಾಸ ಮಾಡಿರುವ ವಿದ್ಯಾರ್ಥಿನಿಯರ ವಿವರಗಳನ್ನು ಪ್ರಾಚಾರ್ಯರಿಂದ ಪಡೆದು ದಿನಾಂಕ 03.10.2013 ರೊಳಗೆ ಅನುದಾನವನ್ನು ಎಸ್‌ಸಿಪಿ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲು ಸೂಚಿಸಲಾಗಿದೆ.

ಸದರಿ ಅನುದಾನವನ್ನು "2202-02-107-3-02-422" ಎಸ್‌ಸಿಪಿ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲು ಸೂಚಿಸಲಾಗಿದೆ. ಮೇಲ್ಕಂಡಂತೆ ಬಿಡುಗಡೆ ಮಾಡಲಾದ ಅನುದಾನದಲ್ಲಿ ಆಯಾ ಜಿಲ್ಲಾ ಉಪನಿರ್ದೇಶಕರು ಸಂಬಂಧಪಟ್ಟ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಬಿಡುಗಡೆ ಮಾಡಿ ಈ ಮೊತ್ತವನ್ನು ಡಿ.ಸಿ.ಬಿಲ್ಲಿನ ಕೆ.ಎಫ್.ಸಿ. ನಮೂನೆ-5 ರಲ್ಲಿ ಚಲನ್ ಮುಖಾಂತರ ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಗಳು ಕಡ್ಡಾಯವಾಗಿ ಡ್ರಾ ಮಾಡಿಕೊಳ್ಳಲು ಸೂಚಿಸತಕ್ಕದು ಹಾಗೂ ಪ್ರಾಚಾರ್ಯರುಗಳಿಗೆ ಈ ಕೆಳಕಂಡ ಷರುತ್ತುಗಳನ್ನು ಪಾಲಿಸಲು ಸೂಚಿಸಲಾಗಿದೆ.

1. ಎಸ್‌ಸಿಪಿ ಯೋಜನೆಯಡಿಯಲ್ಲಿ ವಿದ್ಯಾರ್ಥಿನಿಯರ ಸರ್ಕಾರೇತರ ಯಾವುದೇ ಶುಲ್ಕಗಳನ್ನು ವಸೂಲಿ ಮಾಡಿಲ್ಲವೆಂದು ಪ್ರಾಂಶುಪಾಲರ ದೃಢೀಕರಣ ಪತ್ರ ಪಡೆದು ಬಿಲ್ಲನ್ನು ಮೇಲು ಸಹಿ ಮಾಡುವುದು.
2. ಈ ಬಗ್ಗೆ ವೆಚ್ಚವನ್ನು ನಿಯಮಾನುಸಾರ ಭರಿಸಿ ಲೆಕ್ಕ ಪತ್ರವನ್ನು ನಿರ್ವಹಿಸಲಾಗುವುದು ಎಂಬ ದೃಢೀಕರಣವನ್ನು ಪ್ರಾಂಶುಪಾಲರಿಂದ ಪಡೆಯತಕ್ಕದ್ದು.
3. *ಮೇಲ್ಕಂಡ ಅನುದಾನದಲ್ಲಿ ಕಾಲೇಜಿನ ಪ್ರಾಂಶುಪಾಲರುಗಳು ಈ ಕೆಳಕಂಡ ಬಾಬ್ತುಗಳ ಶುಲ್ಕಗಳನ್ನು ಸಂಬಂಧಪಟ್ಟ ಇಲಾಖೆಗೆ ನೇರವಾಗಿ ಪಾವತಿಸಲು ಈ ಮೂಲಕ ಸೂಚಿಸಬಹುದಾಗಿದೆ.*

| ಕ್ರಮ ಸಂಖ್ಯೆ | ಶುಲ್ಕಗಳ ವಿವರ | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ |
|---|---|---|---|
| 1 | ಶಿಕ್ಷಕರ ಕಲ್ಯಾಣ ನಿಧಿ (TBF) | 21-00 | 21-00 |
| 2 | ವಿದ್ಯಾರ್ಥಿ ಕಲ್ಯಾಣ ನಿಧಿ(SWF) | 8-00 | 8-00 |
| 3 | ವಿಶೇಷ ಕ್ರೀಡಾ ಶುಲ್ಕ (SSF) | 28-00 | 28-00 |
| | ಒಟ್ಟು | 57-00 | 57-00 |

**ಯಾವುದೇ ಕಾರಣಕ್ಕೂ ಈ ಯೋಜನೆಯಡಿ ಬಿಡುಗಡೆಯಾದ ಹಣವನ್ನು ಲ್ಯಾಪ್ಸ್ ಆಗದಂತೆ ಮೇಲ್ಕಂಡ ದಿನಾಂಕದೊಳಗೆ ಡ್ರಾ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದು. ಮೇಲ್ಕಂಡಂತೆ ಡ್ರಾ ಮಾಡಲಾದ ಅನುದಾನ ವಿವರವನ್ನು ಬಳಸಿದ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು** ದಿನಾಂಕ **07.10.2013** ರೊಳಗಾಗಿ ಜಂಟಿ ನಿರ್ದೇಶಕರು (ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012 ಇವರಿಗೆ ಕಳುಹಿಸಲು ಸೂಚಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:।

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು. -
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸಂಬಂಧಿಸಿದ ಖಜಾನಾಧಿಕಾರಿಗಳು.
4. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
5. ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಸೂಕ್ತ ಕ್ರಮಕ್ಕಾಗಿ.
6. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
7. ಕಛೇರಿ ಪ್ರತಿ.

ಹೆಣ್ಣು ಮಕ್ಕಳ ಶುಲ್ಕ ವಿನಾಯ್ತಿ ಯೋಜನೆಯಡಿ 2012-13 ನೇ ಶೈಕ್ಷಣಿಕ ವರ್ಷಕ್ಕೆ ವಿದ್ಯಾರ್ಥಿನಿಯರಿಗೆ ಸರ್ಕಾರೇತರ ಶುಲ್ಕ ವಿನಾಯಿತಿಯ ಮೊತ್ತವನ್ನು ಕಾಲೇಜಿಗೆ ಪಾವತಿಸುವ ಬಗ್ಗೆ ಜಿಲ್ಲಾ ಉಪನಿರ್ದೇಶಕರುಗಳಿಗೆ ಮೊದಲ ಕಂತಿನಲ್ಲಿ ಬಿಡುಗಡೆ ಮಾಡಲಾದ ಮೊತ್ತವನ್ನು ತೋರಿಸುವ ಪಟ್ಟಿ (2012-13 ನೇ ಸಾಲಿನ ವಿದ್ಯಾರ್ಥಿನಿಯರಿಗೆ ಸಂಖ್ಯೆಗಳಲ್ಲಿ ಶೇಕಡ 15.5 ರಂತೆ ಬಿಡುಗಡೆ ಮಾಡಲಾಗಿದೆ. ಪಪೂಶಿ ನಿರ್ದೇಶನಾಲಯದ ಜ್ಞಾಪನ ಸಂಖ್ಯೆ:ಪಪೂಶಿಇ/ಶೈಶಾ-04/ಹೆ.ಮ.ಶು.ವಿ ಎಸ್ ಸಿಪಿ/2013-14, ದಿನಾಂಕ 26.09.2013ಕ್ಕೆ ಅನುಬಂಧ-01

| sl no | District Name | I PUC | II PUC | Total no of students | 15.5% of total students | Total amount | Amount for students |
|---|---|---|---|---|---|---|---|
| 1 | ಬೆಂಗಳೂರು-ಉತ್ತರ | 1641 | 1320 | 2961 | 459 | 380 | 174420 |
| 2 | ಬೆಂಗಳೂರು-ದಕ್ಷಿಣ | 1689 | 1249 | 2938 | 455 | 380 | 172900 |
| 3 | ಬೆಂಗಳೂರು-ಗ್ರಾಮಾಂತರ | 1352 | 1132 | 2484 | 385 | 380 | 146300 |
| 4 | ರಾಮನಗರ | 1750 | 1486 | 3236 | 502 | 380 | 190760 |
| 5 | ಬಳ್ಳಾರಿ | 1706 | 1331 | 3037 | 471 | 380 | 178980 |
| 6 | ಬೆಳಗಾವಿ | 3235 | 2256 | 5491 | 851 | 380 | 323380 |
| 7 | ಬಾಗಲಕೋಟ | 2256 | 1856 | 4112 | 637 | 380 | 242060 |
| 8 | ಬಿಜಾಪುರ | 1304 | 1173 | 2477 | 384 | 380 | 145920 |
| 9 | ಬೀದರ | 1164 | 765 | 1929 | 299 | 380 | 113620 |
| 10 | ದಾವಣಗೆರೆ | 2268 | 1998 | 4266 | 661 | 380 | 251180 |
| 11 | ಚಿತ್ರದುರ್ಗ | 1678 | 1390 | 3068 | 476 | 380 | 180880 |
| 12 | ಚಿಕ್ಕಮಂಗಳೂರು | 2652 | 2252 | 4904 | 760 | 380 | 288800 |
| 13 | ಗದಗ | 1128 | 820 | 1948 | 302 | 380 | 114760 |
| 14 | ಹಾವೇರಿ | 1488 | 925 | 2413 | 374 | 380 | 142120 |
| 15 | ಧಾರವಾಡ | 1065 | 776 | 1841 | 285 | 380 | 108300 |
| 16 | ಗುಲ್ಬರ್ಗಾ | 2209 | 1936 | 4145 | 642 | 380 | 243960 |
| 17 | ಯಾದಗಿರಿ | 1007 | 908 | 1915 | 297 | 380 | 112860 |
| 18 | ಹಾಸನ | 4101 | 3531 | 7632 | 1183 | 380 | 449540 |
| 19 | ಚಿಕ್ಕಬಳ್ಳಾಪುರ | 1552 | 1616 | 3168 | 491 | 380 | 186580 |
| 20 | ಕೋಲಾರ | 2386 | 2265 | 4651 | 721 | 380 | 273980 |
| 21 | ಚಾಮರಾಜನಗರ | 831 | 568 | 1399 | 217 | 380 | 82460 |
| 22 | ಮೈಸೂರು | 4538 | 3876 | 8414 | 1304 | 380 | 495520 |
| 23 | ಮಂಡ್ಯ | 4022 | 3356 | 7378 | 1144 | 380 | 434720 |
| 24 | ಉತ್ತರ ಕನ್ನಡ | 2854 | 2212 | 5066 | 785 | 380 | 298300 |
| 25 | ಕೊಪ್ಪಳ | 1666 | 1262 | 2928 | 454 | 380 | 172520 |
| 26 | ರಾಯಚೂರು | 1041 | 863 | 1904 | 295 | 380 | 112100 |
| 27 | ದಕ್ಷಿಣ ಕನ್ನಡ | 2548 | 2798 | 5346 | 829 | 380 | 315020 |
| 28 | ಉಡುಪಿ | 3217 | 2317 | 5534 | 858 | 380 | 326040 |
| 29 | ಶಿವಮೊಗ್ಗ | 4415 | 3925 | 8340 | 1293 | 380 | 491340 |
| 30 | ತುಮಕೂರು | 4632 | 3956 | 8588 | 1331 | 380 | 505780 |
| 31 | ಕೊಡಗು | 807 | 602 | 1409 | 218 | 380 | 82840 |
| | | 68202 | 56720 | 124922 | 19363 | | 7357940 |

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ